1978’ ಸಿನಿಮಾ ವಿಷಯದಲ್ಲಿ ಆಗಿರುವುದೇ ಅದೇ. ಅಮೇಜಾನ್ ಪ್ರೈಮ್‌ನಲ್ಲಿ ಈ ಸಿನಿಮಾ ನೋಡಿದ ಹಿಂದಿಯ ನಿರ್ಮಾಣಸಂಸ್ಥೆಯೊಂದು ಆ ಸಿನಿಮಾದ ರೀಮೇಕ್ ಮತ್ತು ಡಬ್ಬಿಂಗ್ ಹಕ್ಕನ್ನು ಒಳ್ಳೆಯ ಮೊತ್ತಕ್ಕೆ ಖರೀದಿಸಿದೆ.

ಹಾಗಾದರೆ ಕನ್ನಡದ ಸಿನಿಮಾಗಳು ಅಂತರರಾಷ್ಟ್ರೀಯ ಒಟಿಟಿ ವೇದಿಕೆಗಳಲ್ಲಿ ಬೇಡಿಕೆ ಗಿಟ್ಟಿಸಿಕೊಳ್ಳುವುದು ಸಾಧ್ಯವಿಲ್ಲವೇ? ಖಂಡಿತ ಸಾಧ್ಯವಿದೆ ಅನ್ನುತ್ತಾರೆ ಮಂಸೋರೆ.

‘ಅಮೆಜಾನ್ ಪ್ರೈಮ್‌ನಂಥ ಸಂಸ್ಥೆಯೊಂದು ಕನ್ನಡ ಸಿನಿಮಾಗಳಿಗೆ ಅತ್ಯಂತ ಕಡಿಮೆ ಬಜೆಟ್ ಯಾಕೆ ನಿಗದಿಪಡಿಸಿದೆ ಎಂದು ಚಿತ್ರರಂಗದವರು ಪ್ರಶ್ನಿಸಿಕೊಳ್ಳಬೇಕು. ಅವರು ವ್ಯಾಪಾರಿಗಳು. ಅವರಿಗೆ ಇರುವ ಪ್ರೇಕ್ಷಕರು ಬರೀ ಕನ್ನಡಿಗರಲ್ಲ. ಅವರೊಂದು ಕನ್ನಡ ಸಿನಿಮಾ ಖರೀದಿಸಿದರೂ ಅದನ್ನು ಮಲಯಾಳಂ, ತಮಿಳು, ತೆಲುಗು, ಹಿಂದಿ ಹೀಗೆ ಎಲ್ಲ ಭಾಷೆಯ ಪ್ರೇಕ್ಷಕರೂ ನೋಡಬೇಕು ಎಂದು ಬಯಸುತ್ತಾರೆ. ಆದರೆ ನಾವು ಅಂಥ ಕಂಟೆಂಟ್ ಇರುವ ಸಿನಿಮಾ ಮಾಡುತ್ತಿದ್ದೇವೆಯೆ ಎಂದು ಯೋಚಿಸಬೇಕು. ಕೇರಳದ ಒಂದು ಸಾಂಪ್ರದಾಯಿಕ ಕುಟುಂಬದಲ್ಲಿ ನಡೆಯುವ ಕಥೆ ‘ದಿ ಗ್ರೇಟ್ ಇಂಡಿಯನ್ ಕಿಚನ್’ ಸಿನಿಮಾದಲ್ಲಿದೆ. ಆದರೆ ಅದನ್ನು ಮಲಯಾಳಂನವರಷ್ಟೇ ಅಲ್ಲ, ಬೇರೆ ಎಲ್ಲ ಭಾಷೆಯವರೂ ನೋಡಿದ್ದಾರೆ. ಯಾರೇ ನೋಡಿದರೂ ಅದರಲ್ಲಿನ ಭಾವನೆಗಳು ಕನೆಕ್ಟ್ ಆಗುತ್ತವೆ. ನಮ್ಮಲ್ಲಿ ಎಷ್ಟು ಸಿನಿಮಾಗಳು ಅಂಥ ಯೂನಿವರ್ಸಲ್ ವಸ್ತುಗಳನ್ನು ಇಟ್ಟುಕೊಂಡಿವೆ?’ ಎಂಬ ಮಂಸೋರೆ ಅವರ ಪ್ರಶ್ನೆಯಲ್ಲಿಯೇ ಸಮಸ್ಯೆಯ ಮೂಲ ಕಾಣಿಸುತ್ತದೆ.

‘ಗುಣಮಟ್ಟದಲ್ಲಿ ರಾಜಿಯಾಗದೆ ಎದ್ದು ಕಾಣುವಂಥ ಸಿನಿಮಾ ಮಾಡದ ಹೊರತು ಈ ಸಮಸ್ಯೆಗೆ ಪರಿಹಾರವಿಲ್ಲ’ ಎಂಬುದು ಅವರ ಮಾತಿನಲ್ಲಿ ವ್ಯಕ್ತವಾಗುವ ಕಟುಸತ್ಯ.

ಈ ಸಮಸ್ಯೆಗೆ ಪ್ರಾದೇಶಿಕವಾಗಿಯೇ ಇರುವ ಒಂದು ದಾರಿಯೆಂದರೆ ಕನ್ನಡ ಕಂಟೆಂಟ್‌ಗಳಿಗಾಗಿಯೇ ಒಂದು ಒಟಿಟಿ ಪ್ರಾರಂಭಿಸುವುದು. ಆದರೆ ಇದು ಪ್ರಾಯೋಗಿಕವಾಗಿ ಯಶಸ್ಸು ಗಳಿಸುವ ಸಾಧ್ಯತೆ ಎಷ್ಟಿದೆ?

ಒಂದು ಒಟಿಟಿ ವೇದಿಕೆ ಪ್ರಾರಂಭಿಸುವುದು, ಅದನ್ನು ನಿರ್ವಹಿಸುವುದು ಎಲ್ಲವೂ ದೊಡ್ಡ ಖರ್ಚಿನ ಬಾಬತ್ತು. ಇದಕ್ಕೆ ಆದಾಯ ಯಾವುದು? ಒಂದು ಮೂಲದ ಪ್ರಕಾರ, ಈಗ ಇರುವ ಎಲ್ಲ ಒಟಿಟಿಗಳಿಗೆ ಕರ್ನಾಟಕದಲ್ಲಿನ ಒಟ್ಟೂ ಚಂದಾದಾರರ ಒಟ್ಟು ಸಂಖ್ಯೆ ಹದಿನೆಂಟು ಲಕ್ಷ! ಕನ್ನಡದ್ದೇ ಒಂದು ಒಟಿಟಿ ಪ್ರಾರಂಭಿಸಿದರೂ ಈ ಹದಿನೆಂಟು ಲಕ್ಷದಲ್ಲಿ ಎಷ್ಟು ಜನ ಚಂದಾದಾರರಾಗಬಹುದು? ಅದರಿಂದ ಎಷ್ಟು ಆದಾಯ ಹುಟ್ಟಬಹುದು? ಈ ಲೆಕ್ಕಾಚಾರದ ಫಲಿತಾಂಶ ನಿರಾಶಾದಾಯಕವೇ. ಹಾಗಾಗಿ ಕನ್ನಡದ ಒಂದು ಒಟಿಟಿ ಲಾಭದಾಯಕವಾಗಿ ನಡೆಯುವುದು ಸದ್ಯಕ್ಕಂತೂ ‘ಸಿನಿಮೀಯ’ ಸಾಧ್ಯತೆಯಾಗಿಯೇ ಕಾಣಿಸುತ್ತಿದೆ.



ಹೀರೊ ಚಿತ್ರದ ಪೋಸ್ಟರ್


ಪುಷ್ಕರ್ಮ
ಲ್ಲಿಕಾರ್ಜುನಯ್ಯ,
ನಿರ್ಮಾಪಕ

ಅಲ್ಲಿಗೆ ಲಾಕ್‌ಡೌನ್ ಕರಿನೆರಳಲ್ಲಿ ಒಟಿಟಿ ಎನ್ನುವುದೊಂದು ಭರವಸೆಯ ಬೆಳಕು ಎಂಬುದೂ ಕೂಡ ಸಿನಿಮೀಯ ಸುಳ್ಳು ಎಂದ ಹಾಗಾಯಿತು. ತುಸುವೇ ತೆರೆದಂತೆ ಕಾಣಿಸುತ್ತಿದ್ದ ಹಿಂಬದಿಯ ಬಾಗಿಲೂ, ಅದು ಬಾಗಿಲಲ್ಲ, ಗೋಡೆಯ ಬಿರುಕಷ್ಟೆ ಎಂಬುದು ಈಗಾಗಲೇ ಚಿತ್ರರಂದ ಬಹುತೇಕರಿಗೆ ಅನುಭವಕ್ಕೆ ಬಂದಿದೆ.

## ಮುಂದೇನು?

ಈ ಪ್ರಶ್ನೆ ಮಾತ್ರ ದಿನದಿಂದ ದಿನಕ್ಕೆ ಬೃಹದಾಕಾರವಾಗಿ ಬೆಳೆಯುತ್ತಲೇ ಹೋಗುತ್ತಿದೆ. ಇನ್ನೊಂದು ವರ್ಷದ ನಂತರ ಕನ್ನಡ ಚಿತ್ರರಂಗದ ಪರಿಸ್ಥಿತಿ ಹೇಗಿರುತ್ತದೆ? ಎಂದು ಕೇಳಿಕೊಂಡರೆ ಎದುರಿಗೆ ಉತ್ತರವಲ್ಲ, ಬರೀ ಕತ್ತಲು ಕಾಣಿಸುತ್ತದೆ. ವರ್ಷಗಳ ಕಾಲ ಖಾಲಿ ಹೊಡೆದುಕೊಂಡಿರುವ ಚಿತ್ರಮಂದಿರಗಳಲ್ಲಿ ಎಷ್ಟು ಬದುಕುಳಿಯುತ್ತವೆ, ಎಷ್ಟು ಕೊನೆಯುಸಿರೆಳೆಯುತ್ತದೆ? ಬಡ್ಡಿ ಚಕ್ರಬಡ್ಡಿಯ ಚಕ್ರವ್ಯೂಹದಲ್ಲಿ ಸಿಕ್ಕ ನಿರ್ಮಾಪಕ ಸಮೂಹ ಹೇಗೆ ಎಲ್ಲವನ್ನೂ ದಕ್ಕಿಸಿಕೊಳ್ಳುತ್ತದೆ? ಇಷ್ಟೆಲ್ಲ ಆಗಿಯೂ ಈ ಕೊರೊನಾ ಅಲೆ ಮುಗಿದ ನಂತರ ಚಿತ್ರರಂಗ ಸಿನಿಮೀಯವಾಗಿ ಮೇಲೆದ್ದು ಬರುವ ಸಾಧ್ಯತೆಗಳು ಇವೆಯಾ? ಅನ್ನ ಹುಟ್ಟದ ಮನೆಯಲ್ಲಿ ಎಷ್ಟು ದಿನ ಎಷ್ಟು ಜನ ಹಸಿದುಕೊಂಡು ಕೂತಿರುತ್ತಾರೆ?

ಈ ಎಲ್ಲ ಬಗೆಹರಿಸಲಾಗದ ಪ್ರಶ್ನೆಗಳ ಜಟಿಲ ಬಲೆಯ ನಡುವೆಯೂ ಹೊಸ ಸಿನಿಮಾಗಳು ಸೆಟ್ಟೇರುತ್ತಲೇ ಇವೆ. ಸ್ಟಾರ್ ನಟರು ಸಹಿ ಹಾಕುವ ಲೇಖನಿಯ ಇಂಕು ಖಾಲಿಯಾಗುತ್ತಲೇ ಇದೆ. ಚಿತ್ರರಂಗದಲ್ಲಿ ಹೊಸಬರ ಹರಿವು ಹರಿಯುತ್ತಲೇ ಇವೆ. ಅವರೆಲ್ಲರೂ ಇನ್ನೊಂದು ವರ್ಷದಲ್ಲಿ ಎಲ್ಲಿರಬಹುದು? ಹೇಗಿರಬಹುದು? ಉತ್ತರಿಸುವುದು ಸದ್ಯಕ್ಕಂತೂ ಸಾಧ್ಯವಿಲ್ಲ.

ಎಷ್ಟೆಂದರೂ ಸಿನಿಮಾ ಕನಸಿನ ಜಗತ್ತಲ್ಲವೇ? ನಾಳೆ ಎಲ್ಲವೂ ಸರಿಹೋಗುತ್ತದೆ, ಚಿತ್ರರಂಗ ಮೈಮುರಿದು ಎದ್ದು ನಿಲ್ಲುತ್ತದೆ. ಎಲ್ಲರ ಮುಖದಲ್ಲಿಯೂ ನಗು ಅರಳುತ್ತದೆ ಎಂಬ ಸಿನಿಮೀಯ ಕನಸನ್ನೇ ನೆಚ್ಚಿಕೊಳ್ಳೋಣ. ಆದರೆ, ಈಗ ಕಣ್ಣೆದುರಿಗಿರುವ ಸುಡುಸುಡು ವಾಸ್ತವದ ಬೇಗೆಯನ್ನು ತಾಳಿಕೊಳ್ಳುವುದು ಹೇಗೆ?

ನಿರ್ದೇಶಕ ಹೇಮಂತ್ ರಾವ್ ಅವರ ಮಾತು ಕತ್ತಲೆಯ ದೂರ ದಾರಿಯಲ್ಲಿ ಹಚ್ಚಿಟ್ಟ ಕಿರುಹಣತೆಯಂತೆ ಕಾಣಿಸುತ್ತಿದೆ: ಚಿತ್ರರಂಗ ಪೂರ್ತಿ ಮುಚ್ಚಿಕೊಂಡು ಹೋಗುತ್ತದೆ. ಸಿನಿಮಾದಲ್ಲಿರುವವರೆಲ್ಲ ನಾಶವಾಗಿಬಿಡುತ್ತಾರೆ ಎಂಬುದೆಲ್ಲ ಸುಳ್ಳು. ಹಿಂದೆಯೂ ಎಂಥೆಂಥ ಯುದ್ಧಗಳನ್ನು ಗೆದ್ದುಕೊಂಡು ಬೆಳೆದುಬಂದಿರುವ ಚಿತ್ರರಂಗ ಇದು. ಈ ಯುದ್ಧವನ್ನೂ ಖಂಡಿತ ಗೆದ್ದುನಿಲ್ಲುತ್ತದೆ. ಆದರೆ ಈ ಹೋರಾಟದಲ್ಲಿ ತುಂಬ ಜನ ಸಂಕಷ್ಟಕ್ಕೆ ಈಡಾಗುತ್ತಾರೆ. ನಾವೆಲ್ಲರೂ ಈ ಸಂಕಷ್ಟದ ಪಾಲುದಾರರೇ. ಕಾರ್ಮಿಕವರ್ಗದವರಿಗೆ ಇದರ ಹೊಡೆತ ಹೆಚ್ಚು. ಹಾಗಾಗಿ ನಾವು ಚಿತ್ರರಂಗದವರೆಲ್ಲ ಅವರ ಜೊತೆಗೆ ಒಟ್ಟಾಗಿ ನಿಲ್ಲಬೇಕಿದೆ. ಅವರ ಬದುಕು ಕುಸಿಯದ ಹಾಗೆ ನೋಡಿಕೊಳ್ಳಬೇಕಿದೆ. ಹಾಗೆ ಒಬ್ಬರಿಗೊಬ್ಬರು ಆಗುತ್ತಲೇ ಒಳ್ಳೆಯ ದಿನಗಳಿಗಾಗಿ ಕಾಯಬೇಕಿದೆ.

ಪ್ರತಿಕ್ರಿಯಿಸಿ: feedback@sudha.co.in